ಇತರ ಗಂಡಸರೊಡನೆ ಧರ್ಮ ಸ್ನಾನಕ್ಕೆ ಹೋಗುವುದು ಕೂಡ ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಪ್ರತಿ ತೊಗಲಿನ ಹಿಂದೆ ಬರಿಯ ರಕ್ತವೇ ಕಾಣುತ್ತಿತ್ತು. ಪ್ರತಿ ಕತ್ತೂ ಚೂರಿಯ ನೆನಪು ತರುತ್ತಿತ್ತು. ಮನುಷ್ಯ ಜೀವಿಗಳೂ ಪ್ರಾಣಿಗಳ ಹಾಗೆಯೇ ತೊಡೆಸಂದಿ, ನರ, ಕರುಳು, ಅಂಡು ಇರುವವರೇ. ಕಟುಕ ಕತ್ತಿಯ ಒಂದು ಬೀಸು ಸಾಕು, ಈ ಸುಸ್ಥಿರ ಗೃಹಸ್ಥರೆಲ್ಲ ಅಸಹಾಯಕ ಹಸುವಿನ ಹಾಗೆ ಬಿದ್ದು ಒದ್ದಾಡುತ್ತಾರೆ. ಟಾಲ್ಮುಡ್ ಹೇಳುತ್ತದೆ – ಯಾವುದು ಸುಡುವುದಕ್ಕೆ ಅರ್ಹವೋ ಅದು ಆಗಲೇ ಸುಟ್ಟು ಹೋಗಿದೆಯೆಂದೇ ಅರ್ಥ. ಭ್ರಷ್ಟವಾಗಿ, ಹುಳ ಹಿಡಿದು, ಕೊಳೆತು ಇರುವುದೇ ಮನುಷ್ಯ ದೇಹದ ಅಂತಿಮ ಫಲವೆನ್ನುವುದಾದರೆ ಅದು ಶುರುವಿನಿಂದಲೂ ಭ್ರಷ್ಟ, ಕೊಳೆತ ವಸ್ತುವೇ ಅಲ್ಲವೇ?' ಎನ್ನುತ್ತಾನೆ. ಮನುಷ್ಯನೇ ಕೊಳೆತು ಹೋದ ಮೇಲೆ ಅವನ ಸಂಪತ್ತಿನದೇನು ಗತಿ?

★★★

ಇಲ್ಲಿ ನಾನು ಯಾಕೆ ಸಿಂಗರನ ಕಥೆಯ ವಸ್ತು ಸಂಗತಿಯನ್ನು ಉದ್ಧರಿಸಿ ಹೇಳುತ್ತಿದ್ದೇನೆಂದರೆ ತಂದೆಯನ್ನು ಮಗ 'ಹಣ ಎಲ್ಲಿ ಇಟ್ಟೆ' ಎಂದು ಕೇಳಿದರೆ ತಂದೆ ಮಂಚದಡಿಯ ಕಾಲಿನ ಉದ್ದನೆಯ ಬೂಟು ಎಳೆದು ಅದರ ಒಳಗಿಟ್ಟದ್ದನ್ನು ತೋರಿಸುತ್ತಾನೆ. ಅದು ಮಗನ ಅಮೆರಿಕದ ಸಂಪಾದನೆಯ ಭಾರಿ ಮೊತ್ತ? ಒಂದು ಕಥೆ ಅಮೆರಿಕದಿಂದ ಬಂದ ಹಣವನ್ನು ತೃಣವನ್ನಾಗಿಸಿದರೆ, ಸಿಂಗರನ ಅದೇ ಇನ್ನೊಂದು 'ಮೋಚಿಯ ಮಕ್ಕಳು' ಕಥೆಯಲ್ಲಿ ಅಮೆರಿಕಕ್ಕೆ ಮಕ್ಕಳ ಕಾರಣಕ್ಕಾಗಿ ಒತ್ತಾಯಪೂರ್ವಕ ಬಂದ ಅಪ್ಪ ಅಲ್ಲಿಯ ದ್ರವ್ಯ ಸಂಪತ್ತನ್ನು ತೃಣವಾಗಿಸುತ್ತಾನೆ. ಭಾರತದ ಆಶ್ರಮವಾಸಿ ಮಹಾತ್ಮ ಗಾಂಧಿ ಹತ್ತಿಯಿಂದ ನೂಲು ನೇಯ್ದು ಹಣ ಸಂಪಾದಿಸುತ್ತಿದ್ದ ಅವರ ಬದುಕಿನ ಉದ್ದೇಶಗಳಿಗೂ, ಸಿಂಗರ್ ಅದೇ ಸಮಯದಲ್ಲಿ ನ್ಯೂಯಾರ್ಕ್‌ನಲ್ಲಿ ಕೂತು ಬರೆಯುತ್ತಿದ್ದ ಕಥೆಗಳಿಗೂ ಏನಾದರೂ ಒಳಸಂಬಂಧವಿದೆಯೇ ಎನಿಸಿತು. ಹಾಗೆಯೇ ನನಗೆ ಅವೆಲಾನ್ ಪಾರ್ಕಿನಲ್ಲಿ ಶ್ರೀಧರ್ ಹೇಳಿದ ಮಕ್ಕಳನ್ನು ಕಳೆದುಕೊಂಡ ಜೇಮ್ಸ್ ಸೈಮನ್ ಅವರ ದ್ರವ್ಯದಾನ ಸಂಗತಿಗೂ, ಅದೇ ಹಣವನ್ನು ಕುರಿತಾದ ಸಿಂಗರನ ಕಥೆಗಳ ಉದ್ದೇಶಕ್ಕೂ ಹೆಚ್ಚೇನೂ ವ್ಯತ್ಯಾಸವಿಲ್ಲವೆನಿಸಿತು.

(ಇಲ್ಲಿ ಉದ್ಧರಿಸಿರುವ ಸಿಂಗರ್‌ನ ಕಥೆಯ ಭಾಗವನ್ನು ಓ.ಎಲ್. ನಾಗಭೂಷಣ ಸ್ವಾಮಿ ಅವರು ಅನುವಾದಿಸಿರುವ 'ಸಿಂಗರ್ ಕಥೆಗಳು' ಸಂಕಲನದ 'ಮಗ ಅಮೆರಿಕದಿಂದ' ಎಂಬ ಕತೆಯಿಂದ ತೆಗೆದುಕೊಳ್ಳಲಾಗಿದೆ)

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ. ಅವರ ಕುಮಾರವ್ಯಾಸ ಭಾರತ ಸಂಗ್ರಹ, 'ಸರಸ ಸೌಗಂಧಿಕದ ಪರಿಮಳ' ಹಾಗೂ ಕಾದಂಬರಿ 'ಕಾಲಯಾತ್ರೆ' ಇತ್ತೀಚೆಗೆ ಪ್ರಕಟವಾಗಿವೆ.